

ವಿಕೆಟ್ ಕೀಪಿಂಗ್‌ನಲ್ಲಿ ಚುರುಕುತನ ತೋರಿದ ಸಂಜು ಸ್ಯಾಮ್ಸನ್

ಆಡಿದ್ದರು. ಅಲ್ಲಿ ನಾಯಕರಾಗಿ, ವಿಕೆಟ್‌ಕೀಪರ್ –ಬ್ಯಾಟರ್ ಆಗಿ ಮಿಂಚಿದ್ದರು. ಮೆಂಟರ್ ರಾಹುಲ್ ದ್ರಾವಿಡ್, ಸ್ಪಿನ್ ದಿಗ್ಗಜ ಶೇನ್ ವಾರ್ನ್ ಅವರಂತಹವರ ಮಾರ್ಗದರ್ಶನದಲ್ಲಿ ಪಳಗಿದ್ದರು. ಈ ವರ್ಷ ರಾಜಸ್ಥಾನ ಮತ್ತು ಚೆನ್ನೈ ತಂಡಗಳು ಟ್ರೇಡ್ ವಿಂಡೋದಲ್ಲಿ ಸಂಜು ಸ್ಯಾಮ್ಸನ್ ಮತ್ತು ರವೀಂದ್ರ ಜಡೇಜ ಅವರನ್ನು ವಿನಿಮಯ ಮಾಡಿಕೊಂಡಿದ್ದವು. ರಾಜಸ್ಥಾನ ತಂಡದಲ್ಲಿ ಜಡೇಜ ಮಿಂಚುತ್ತಿದ್ದಾರೆ. ಸಂಜು ಚೆನ್ನೈನಲ್ಲಿ ತಮ್ಮ ಛಾಪು ಮೂಡಿಸುತ್ತಿದ್ದಾರೆ. ಪ್ರತಿಭೆ, ಸಾಮರ್ಥ್ಯ ಗಟ್ಟಿಯಾಗಿದ್ದರೆ ನೆಲ ಮತ್ತು ತಂಡ ಯಾವುದಾದರೂ ಯಶಸ್ಸು ಖಚಿತ ಎನ್ನುವುದಕ್ಕೆ ಇವರಿಬ್ಬರೂ ಸಾಕ್ಷಿಯಾಗುತ್ತಾರೆ.

ಐದು ಬಾರಿಯ ಚಾಂಪಿಯನ್ ಮುಂಬೈ ಎದುರು ದೊಡ್ಡ ವೈಯಕ್ತಿಕ ಸ್ಕೋರ್ ದಾಖಲಿಸಿದ ಚೆನ್ನೈ ಸೂಪರ್ ಕಿಂಗ್ಸ್ ಆಟಗಾರನೆಂಬ ಹೆಗ್ಗಳಿಕೆ ಸಂಜು ಅವರದ್ದಾಗಿದೆ. ಐಪಿಎಲ್‌ನಲ್ಲಿ ಅವರು ಒಟ್ಟು ಐದು ಶತಕ ಗಳಿಸಿದ್ದಾರೆ. ಅಗ್ರಸ್ಥಾನದಲ್ಲಿರುವ ವಿರಾಟ್ ಕೊಹ್ಲಿ ಅವರ ದಾಖಲೆ ಸಮ ಮಾಡಲು ಇನ್ನೂ ಮೂರು ಶತಕಗಳಷ್ಟೇ ಅವರಿಗೆ ಬೇಕಿದೆ. 31 ವರ್ಷದ ಸಂಜು ಸದ್ಯ ಇರುವ ಫಾರ್ಮ್‌ನಲ್ಲಿ ಈ ದಾಖಲೆ ಕಷ್ಟವೇನೂ ಅಲ್ಲ.

ದೇಶಿ ಕ್ರಿಕೆಟ್‌ನಲ್ಲಿ ಹತ್ತಾರು ಸಾಧನೆಗಳನ್ನು ಮಾಡುತ್ತ ಬೆಳೆದಿರುವ ಸಂಜು ಅವರು ಟಿ20 ಕ್ರಿಕೆಟ್‌ನಲ್ಲಿಯೂ ಸಾಂಪ್ರದಾಯಿಕ ಕೌಶಲಗಳ ಮೂಲಕ ರನ್ ಗಳಿಸುತ್ತಾರೆ. ಅಲ್ಲೊಂದು ಇಲ್ಲೊಂದು ರಿವರ್ಸ್ ಸ್ವೀಪ್, ಸ್ಕೂಪ್ ಪ್ರಯೋಗ ಮಾಡುತ್ತಾರೆ. ಆದರೆ ಅವರ ಬಹುತೇಕ ರನ್‌ಗಳು ಕ್ರಿಕೆಟ್ ಕಾಪಿ ಪುಸ್ತಕದಿಂದ ಹೊರಹೊಮ್ಮುತ್ತವೆ. ಅವುಗಳಿಗೆ ತಮ್ಮ ಭುಜಬಲವನ್ನು ಹದವಾಗಿ ಮಿಶ್ರಣ ಮಾಡಿ ಬೌಲರ್‌ಗಳಿಗೆ ಚಳ್ಳೆಹಣ್ಣು ತಿನ್ನಿಸುತ್ತಾರೆ. ಪದಚಲನೆಯು ಅವರ ದೊಡ್ಡ ಪ್ಲಸ್ ಪಾಯಿಂಟ್. ವೇಗದ ಬೌಲರ್‌ಗಳ ಎಸೆತಗಳ ಲೆಂಗ್ತ್ ಅನ್ನು ಅವರು ಚುರುಕಾದ ಪದಚಲನೆಯ ಮೂಲಕ ಹೊಂದಿಸಿಕೊಂಡು ಮಾಡುವ ಡ್ರೈವ್‌ಗಳು ಬೆಣ್ಣೆಯಿಂದ ಕೂದಲು ತೆಗೆದಷ್ಟೇ ನವಿರಾಗಿರುತ್ತವೆ. ನೆಟ್ಸ್‌ನಲ್ಲಿ ಸಾವಿರಾರು ಎಸೆತಗಳನ್ನು ಎದುರಿಸಿ ಕಲಿತ ಕೌಶಲ ಅದು.




ಸಂಜು ಟಿ20 ಕ್ರಿಕೆಟ್‌ನಲ್ಲಿ ಏನೇ ಸಾಧನೆ ಮಾಡಿದರೂ ಭಾರತ ಟೆಸ್ಟ್ ತಂಡದಲ್ಲಿ ಪದಾರ್ಪಣೆ ಮಾಡುವ ಕನಸನ್ನೂ ಈಗಲೂ ಜೀವಂತವಾಗಿಟ್ಟುಕೊಂಡಿದ್ದಾರೆ. ಇತ್ತೀಚೆಗೆ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ನಾಕೌಟ್ ಹಂತದಲ್ಲಿ ಅವರು ಆಡಿದ ರೀತಿ ಎಲ್ಲರನ್ನೂ ನಿಬ್ಬೆರಗಾಗಿಸಿತ್ತು. ಸತತ ವೈಫಲ್ಯ ಅನುಭವಿಸಿದ ನಂತರವೂ ನಾಕೌಟ್ ಹಂತದಲ್ಲಿ ಪುಟಿದೆದ್ದ ರೀತಿಗೆ ಭಾರತ ತಂಡವು ಚಾಂಪಿಯನ್ ಆಗಿತ್ತು. ಸತತ ಮೂರು ಪಂದ್ಯಗಳಲ್ಲಿ ಅವರು ಅರ್ಧಶತಕದ ಗಡಿ ದಾಟಿದ್ದರು. ಗೆಲುವಿನ ರೂವಾರಿಯಾಗಿದ್ದರು.

ಅಂದ ಹಾಗೆ; ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯಕ್ಕೆ ಒಂದೆರಡು ದಿನಗಳ ಮುನ್ನ ಸಂಜು ಅವರು ದಿಗ್ಗಜ ಸಚಿನ್ ತೆಂಡೂಲ್ಕರ್ ಮನೆಯಲ್ಲಿ ಚಹಾ ಕುಡಿದು ಬಹಳ ಹೊತ್ತು ಹರಟೆ ಹೊಡೆದಿದ್ದ ಚಿತ್ರಗಳು ಇನ್‌ಸ್ಟಾಗ್ರಾಮ್‌ನಲ್ಲಿ ಓಡಾಡಿದ್ದವು. ಸಚಿನ್ ನೀಡಿದ ಸಲಹೆಗಳನ್ನು ಚಾಚೂ ತಪ್ಪದೇ ಪಾಲಿಸಿದ್ದರು. ತಮ್ಮ ಆಟವನ್ನು ಉತ್ತಮಗೊಳಿಸಿಕೊಂಡಿದ್ದರು. ಅದೇ ಸಚಿನ್ ಅವರು ಮೆಂಟರ್ ಆಗಿರುವ ಮುಂಬೈ ತಂಡದ ಎದುರು ಅವರದ್ದೇ ತವರಿನಂಗಳದಲ್ಲಿ ಅಜೇಯ ಶತಕ ಹೊಡೆದು ಸಂಭ್ರಮಿಸಿದರು!